# ಭಾಗ 3
## ರದ್ದು ವಿವಾಹ ಮತ್ತು ಕರ್ನಾಟಕದ ಕಾನೂನು

**ಕರ್ನಾಟಕದಲ್ಲಿ ಬಾಲ್ಯ ವಿವಾಹದ ಬಗ್ಗೆ ಕಾನೂನು ಯಾವ ಮಾನ್ಯತೆಯನ್ನು ಹೊಂದಿದೆ?**
ಕರ್ನಾಟಕದಲ್ಲಿ, ಎಪ್ರಿಲ್ 2017 ರ ರಾಜ್ಯ ತಿದ್ದುಪಡಿಯಲ್ಲಿ ಬಾಲ್ಯ ವಿವಾಹಗಳನ್ನು ರದ್ದು, ಅನೂರ್ಜಿತ ಎಂದು ಘೋಷಿಸಿದೆ. ಇದರ ಅರ್ಥವೇನೆಂದರೆ, ಯಾವುದೇ ಬಾಲ್ಯ ವಿವಾಹವು ಒಂದು ಮಾನ್ಯ ವಿವಾಹ ಆಗಿರುವುದಿಲ್ಲ ಮತ್ತು ನ್ಯಾಯಾಲಯವು ಪಕ್ಷಿದಾರರನ್ನು ಪತಿ ಮತ್ತು ಪತ್ನಿ ಎಂದು ಪರಿಗಣಿಸುವುದಿಲ್ಲ.

> **ಗಮನಿಸಿ: ಈ ಬದಲಾವಣೆಗಳು ಎಪ್ರಿಲ್ 2017 ರ ನಂತರ ನಡೆದ ಬಾಲ್ಯ ವಿವಾಹಗಳಿಗೆ ಮಾತ್ರ ಅನ್ವಯಿಸುತ್ತದೆ. ಯಾವುದೇ ವಿವಾಹವು ಎಪ್ರಿಲ್ 2017 ಮೊದಲು ನಡೆದಲ್ಲಿ ಹಿಂದಿನ ಕಾನೂನುಗಳು ಅನ್ವಯಿಸುತ್ತದೆ, ಅಲ್ಲದೇ ವಿವಾಹವನ್ನು ನಿರರ್ಥಕಗೊಳಿಸಲು ರದ್ದುಪಡಿಸುವಿಕೆಯ ಘೋಷಣೆಯನ್ನು ಪಡೆಯಬೇಕೆಂದು ಅರ್ಥೈಸಿಕೊಳ್ಳಬೇಕು.**

**ಕರ್ನಾಟಕದಲ್ಲಿ ಬಾಲ್ಯ ವಿವಾಹವು ರದ್ದಾದ ಕಾರಣ ವಿಚಾರಣಾ ಅರ್ಜಿಯನ್ನು ಸಲ್ಲಿಸುವ ಅವಶ್ಯಕತೆ ಇರುತ್ತದೆಯೇ?**
ಕಾನೂನಿನಲ್ಲಿ ಅನೂರ್ಜಿತ ವಿವಾಹ ಇಲ್ಲದಿರುವ ಕಾರಣ, ಒಂದು ಔಪಚಾರಿಕ ನ್ಯಾಯಾಲಯ ತೀರ್ಪನ್ನು ಪಡೆಯುವುದು ಕಡ್ಡಾಯವಾಗಿಲ್ಲ (ಎಂ. ಎಂ.ಮಲ್ಹೋತ್ರಾ ವಿ. ಯೂನಿಯನ್ ಆಫ್ ಇಂಡಿಯಾ, 2005) ಎಂದು ಸರ್ವೋಚ್ಚ ನ್ಯಾಯಾಲಯವು ತಿಳಿಸಿದೆ.

ಹೀಗಿದ್ದರೂ, ಕರ್ನಾಟಕದ ಕಾನೂನಿನ ಪ್ರಕಾರ ಬಾಲ್ಯ ವಿವಾಹವು ಅನೂರ್ಜಿತವಾಗಿದ್ದರೂ ಕೂಡಾ ವಿವಾಹವನ್ನು ರದ್ದುಗೊಳಿಸಿದ ಘೋಷಣೆಯನ್ನು ಪಡೆಯಲು ಜಿಲ್ಲಾ ನ್ಯಾಯಾಲಯದಲ್ಲಿ ಒಂದು ಮೊಕದ್ದಮೆಯನ್ನು ದಾಖಲಿಸುವುದು ಸೂಕ್ತವಾಗಿರುತ್ತದೆ. ಇದರಿಂದ ಬಾಲಕಿಗೆ ಪಿಸಿಎಂಎ ಕಾಯ್ದೆಯ ಅಡಿಯಲ್ಲಿ ನಿರ್ವಹಣೆಯನ್ನು, ಮಕ್ಕಳ ಪಾಲನೆಯ ಒಡೆತನವನ್ನು ಪಡೆಯಲು ಅಥವಾ ವಸತಿಯ ನಿರ್ದೇಶನವನ್ನು ಪಡೆಯಲು ಮತ್ತು ಅತೀ ಮುಖ್ಯವಾಗಿ ಭವಿಷ್ಯದ ಕಾನೂನು ಸಮಸ್ಯೆಗಳನ್ನು ಅದರಲ್ಲೂ ಮರುವಿವಾಹಕ್ಕೆ ಸಂಬಂಧಿಸಿದಂದ ಸಮಸ್ಯೆಗಳನ್ನು ತಪ್ಪಿಸಲು ಅನುಕೂಲವಾಗುತ್ತದೆ.

**ಅಪ್ರಾಪ್ತ ಬಾಲಕಿಯ ಬಾಲ್ಯ ವಿವಾಹವನ್ನು ಕಾನೂನು ಅನೂರ್ಜಿತ ಎಂದು ಪರಿಗಣಿಸಿದಾಗ ಆಕೆಯ ಹಕ್ಕುಗಳನ್ನು ಕಾನೂನು ಪರಿಗಣಿಸುತ್ತದೆಯೇ?**
ಹೌದು. ಒಬ್ಬ ವಿವಾಹವಾದ ಬಾಲಕಿಯು ತನ್ನ ವಿವಾಹವನ್ನು ರದ್ದುಗೊಳಿಸಲು ದಾಖಲಿಸುವ ಮೊಕದ್ದಮೆ ಮತ್ತು ಪರಿಹಾರಗಳು ಒಬ್ಬ ಅಪ್ರಾಪ್ತ ಬಾಲಕಿಗೂ ಅನ್ವಯಿಸುವುದು ಅಲ್ಲದೇ ಆಕೆಯು ಅದೇ ಪರಿಹಾರಗಳನ್ನು ಪಡೆಯಬಹುದು. (ಭಾಗ 2 ಗಮನಿಸಿ)

ಕೆಲವು ವೈಯಕ್ತಿಕ ಕಾನೂನುಗಳಲ್ಲಿಯೂ ನಿರ್ವಹಣೆಯನ್ನು ಪಡೆಯುವ ಅವಕಾಶಗಳನ್ನು ಹೊಂದಿದ್ದು ಅಲ್ಲಿ ವಿವಾಹ ರದ್ದುಗೊಂಡಿದೆ ಎಂದು ಘೋಷಿಸುತ್ತದೆ. ಹೀಗಿದ್ದರೂ, ಪಿಸಿಎಂಎ ಕಾಯ್ದೆಯ ಬಾಲ್ಯ ವಿವಾಹ ಪ್ರಕರಣಗಳನ್ನು ನಿಭಾಯಿಸಲು ಒಂದು ವಿಶೇಷ ಕಾನೂನಾಗಿದೆ ಮತ್ತು ವೈಯಕ್ತಿಕ ಕಾನೂನುಗಳ ಮೇಲೆ ಈ ಕಾನೂನು ಪ್ರಚಲಿತವಾಗಿರುವ ಕಾರಣ ಇದರ ಅಡಿಯಲ್ಲಿ ನಿರ್ವಹಣೆಯನ್ನು ಪಡೆಯಲು ಮೊಕದ್ದಮೆಯನ್ನು ದಾಖಲಿಸುವುದು ಸೂಕ್ತವಾಗಿರುತ್ತದೆ.

# ಭಾಗ 4
## ಕಾನೂನಿನ ಅಡಿಯಲ್ಲಿನ ಅಧಿಕಾರಿಗಳು

**ಬಾಲ್ಯ ವಿವಾಹ ನಿಷೇಧ ಅಧಿಕಾರಿಯೆಂದರೆ ಯಾರು (ಸಿಎಂಪಿಓ)?**
ಸಿಎಂಪಿಓ ಇವರು ಸರ್ಕಾರಿ ಅಧಿಕಾರಿಗಳಾಗಿದ್ದು, ಬಾಲ್ಯ ವಿವಾಹಗಳನ್ನು ನಿಯಂತ್ರಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಹೆಚ್ಚಿನ ರಾಜ್ಯಗಳಲ್ಲಿ, ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ, ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ ಮತ್ತು ಡಿವಿ ಕಾಯ್ದೆಯ ಅಡಿಯ ರಕ್ಷಣಾ ಅಧಿಕಾರಿಗಳು ಕೂಡಾ ಸಿಎಂಪಿಓ ಅಧಿಕಾರಿ ಆಗಿರುತ್ತಾರೆ. ಕರ್ನಾಟಕದಲ್ಲಿ, ಉಪ ಆಯುಕ್ತರು, ಜಿಲ್ಲಾ ಪೋಲಿಸ್ ಅಧೀಕ್ಷಕರು, ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ, ಕಂದಾಯ ಅಧಿಕಾರಿಗಳು, ಕ್ಷೇತ್ರ ಶಿಕ್ಷಣ ಅಧಿಕಾರಿಗಳು, ರಕ್ಷಣಾ ಅಧಿಕಾರಿಗಳು, ತಹಶೀಲ್ದಾರರು ಮತ್ತು ಶಾಲಾ ಮುಖ್ಯೋಪಾಧ್ಯಾಯರನ್ನು ಸಿಎಂಪಿಓ ಅಧಿಕಾರಿಗಳಾಗಿ ಸರ್ಕಾರ ನೇಮಿಸಿದೆ.

**ಸಿಎಂಪಿಓ ಅಧಿಕಾರಿಗಳ ಕರ್ತವ್ಯಗಳು ಯಾವುವು?**
- ಒಂದು ದೂರನ್ನು ಪಡೆದ ನಂತರ: ಬಾಲ್ಯ ವಿವಾಹ ನಡೆಯುವ ಸಾಧ್ಯತೆಗಳಿರುವ ಯಾವುದೇ ಸ್ಥಳಕ್ಕೆ ಭೇಟಿ ಮಾಡುವುದು ಮತ್ತು ವಿವಾಹವನ್ನು ತಡೆಗಟ್ಟುವುದು
- ಪಿಸಿಎಂಎ ಕಾಯ್ದೆಯ ಅಡಿಯಲ್ಲಿ ಅಪರಾಧಿಗಳ ವಿರುದ್ಧ ಅಪರಾಧ ದೂರುಗಳನ್ನು (ಮೊದಲ ಮಾಹಿತಿ ವರದಿಗಳು) ದಾಖಲಿಸುವಂತೆ ಪೋಲಿಸರಿಗೆ ಮಾಹಿತಿಯನ್ನು ನೀಡುವುದು
- ಅಪರಾಧಿಗಳ ವಿರುದ್ಧ ಪರಿಣಾಮಕಾರಿಯಾಗಿ ಕಾನೂನು ಕ್ರಮ ಕೈಗೊಳ್ಳಲು ಸಾಕ್ಷಿಗಳನ್ನು ಸಂಗ್ರಹಿಸುವುದು
- ಕುಟುಂಬದ ಸದಸ್ಯರನ್ನು, ವ್ಯಕ್ತಿಗಳನ್ನು ಮತ್ತು ಸಮುದಾಯದ ಸದಸ್ಯರನ್ನು ಭೇಟಿ ಮಾಡುವುದು, ಅವರೊಂದಿಗೆ ಆಪ್ತ ಸಮಾಲೋಚನೆ ನಡೆಸುವುದು ಮತ್ತು ಅವರು ಬಾಲ್ಯ ವಿವಾಹವನ್ನು ಉತ್ತೇಜಿಸದಂತೆ ಮತ್ತು ಅನುಮತಿಸುವುದನ್ನು ತಡೆಯುವಂತೆ ಪ್ರೋತ್ಸಾಹಿಸುವುದು
- ಬಾಲ್ಯ ವಿವಾಹದ ಸಮಸ್ಯೆಗಳ ಬಗ್ಗೆ ಸಮುದಾಯದಲ್ಲಿ ಅರಿವು ಮೂಡಿಸುವುದು ಮತ್ತು ಸಂವೇದನೆಗೊಳಿಸುವುದು

**ಒಬ್ಬ ಸಿಎಂಪಿಓ ಅಧಿಕಾರಿಯು ತಡೆಯಾಜ್ಞೆಗೆ, ನಿರ್ವಹಣೆ ಮತ್ತು ಮಕ್ಕಳ ಪಾಲನೆ ಒಡೆತನಕ್ಕಾಗಿ ನ್ಯಾಯಾಲಯವನ್ನು ಸಂಪರ್ಕಿಸಬಹುದು. ಅವನು ಅಥವಾ ಅವಳು ಮಗುವಿನೊಂದಿಗೆ ವಿಚಾರಣಾ ಮೊಕದ್ದಮೆಯ ಅರ್ಜಿಯನ್ನು ದಾಖಲಿಸಬಹುದು.**

ಸಿಎಂಪಿಓ ಅಧಿಕಾರಿಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಮಕ್ಕಳ ಸಹಾಯವಾಣಿ (1098 ಕರೆ ಮಾಡಿ) ಮುಖಾಂತರ ಅಥವಾ ನಿಮ್ಮ ರಾಜ್ಯದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವೆಬ್‌ಸೈಟ್‌ಗೆ ಭೇಟಿ ನೀಡಿ. ಒಂದು ವೇಳೆ ನಿಮಗೆ ಸಿಎಂಪಿಓ ಅಧಿಕಾರಿಯನ್ನು ಸಂಪರ್ಕಿಸಲು ಸಾಧ್ಯವಾಗದಿದ್ದಲ್ಲಿ ಅಥವಾ ಸಿಎಂಪಿಓ ನೀಡಿದ ಪ್ರತಿಕ್ರಿಯೆಯಿಂದ ನಿಮಗೆ ತೃಪ್ತಿಯಾಗದಿದ್ದಲ್ಲಿ, ಈ ವಿಚಾರದಲ್ಲಿ ಮೇಲ್ವಿಚಾರಣಾ ಅಧಿಕಾರವನ್ನು ಹೊಂದಿರುವ ಜಿಲ್ಲಾಧಿಕಾರಿಯವರನ್ನು ಅಥವಾ ಉಪ ಆಯುಕ್ತರನ್ನು ನೀವು ಸಂಪರ್ಕಿಸಬಹುದು. ನೀವು ಮಕ್ಕಳ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳ ದೂರುಗಳನ್ನು ಪಡೆಯುವ ಮತ್ತು ಪರಿಶೀಲಿಸುವ ಜವಾಬ್ದಾರಿಯನ್ನು ಹೊಂದಿರುವ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವನ್ನು ಕೂಡಾ ನೀವು ಸಂಪರ್ಕಿಸಬಹುದು.

# ಬಾಲ್ಯ ವಿವಾಹದ ವಿರುದ್ಧ ಈಗ ಕ್ರಮ ಕೈಗೊಳ್ಳಿ

ಬಾಲ್ಯ ವಿವಾಹದ ವಗ್ಗೆ ಯಾರಾದರೂ ವರದಿ ಮಾಡಬಹುದು.

ಮಾಡಬೇಕಾದ ವಿಷಯಗಳು:

- ನಿಮ್ಮ ಹತ್ತಿರದ ಬಾಲ್ಯ ವಿವಾಹ ನಿಷೇಧ ಅಧಿಕಾರಿ, ಅಥವಾ ಪೋಲಿಸ್ ಠಾಣೆಯನ್ನು ಸಂಪರ್ಕಿಸಿ
- ಶುಲ್ಕ-ರಹಿತ (ಟೋಲ್-ಫ್ರೀ) ಮಕ್ಕಳ ಸಹಾಯವಾಣಿ 1098 ಗೆ (ದಿನದ 24 ಗಂಟೆ ಲಭ್ಯವಿರುತ್ತದೆ) ಕರೆ ಮಾಡುವ ಮುಖಾಂತರ
- ಕರ್ನಾಟಕದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಬಾಲ್ಯ ವಿವಾಹ ಸಹಾಯವಾಣಿ 080-22351089 ಗೆ ಕರೆ ಮಾಡುವ ಮುಖಾಂತರ ಅಥವಾ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ವೆಬ್‌ಸೈಟ್‌ಗೆ ಭೇಟಿ ನೀಡಿ.

---

ಕಾನೂನು ನೆರವು ಅಥವಾ ನೀವು ದೂರನ್ನು ದಾಖಲಿಸಲು ಇಚ್ಚಿಸಿದ್ದಲ್ಲಿ, ಸಂಪರ್ಕಿಸಿ:

ಸೆಂಟರ್ ಫಾರ್ ಲಾ ಅಂಡ್ ಪಾಲಿಸಿ ರಿಸರ್ಚ (ಬೆಂಗಳೂರು):
080-40912112 ಅಥವಾ reachout@clpr.org.in
ಡಿ 6, ಡೊನ ಸಿಂಥಿಯಾ ಅಪಾರ್ಟ್‌ಮೆಂಟ್ಸ್, 35 ಪ್ರಿಮ್‌ರೋಸ್ ರಸ್ತೆ,
ಅಶೋಕ ನಗರ, ಬೆಂಗಳೂರು 560025

CENTRE FOR LAW & POLICY RESEARCH

CENTER FOR REPRODUCTIVE RIGHTS

# ಬಾಲ್ಯ ವಿವಾಹ ಮತ್ತು ವಿವಾಹಿತ ಹೆಣ್ಣು ಮಕ್ಕಳ ಹಕ್ಕುಗಳು



# ಕಾನೂನು ಏನು ಹೇಳುತ್ತದೆ?

# ಭಾಗ 1
## ಬಾಲ್ಯ ವಿವಾಹಕ್ಕೆ ಸಂಬಂಧಿತ ಕಾನೂನುಗಳು

**ಮಗು ಎಂದರೆ ಯಾರು?**
**18 ವಯಸ್ಸಿಗಿಂತ ಕಡಿಮೆ ವಯಸ್ಸಿನ ಯಾವುದೇ ವ್ಯಕ್ತಿಯನ್ನು** ಭಾರತದ ಕಾನೂನು ಮಗು ಎಂದು ವ್ಯಾಖ್ಯಾನಿಸುತ್ತದೆ. ಬಾಲ್ಯ ವಿವಾಹ ನಿಷೇಧ ಕಾಯ್ದೆ, 2006 (ಪಿಸಿಎಂಎ); ಬಾಲಕ ನ್ಯಾಯ ಅಧಿನಿಯಮ, 2000; ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ, 2012; ಭಾರತ ದಂಡ ಸಂಹಿತೆ,1860; ಮತ್ತು ಭಾರತ ವಯಸ್ಕ ಕಾಯ್ದೆ, 1875 ಗಳಲ್ಲಿ ಈ ವ್ಯಾಖ್ಯಾನವನ್ನು ಬಳಸಲಾಗಿದೆ.

**ಭಾರತದಲ್ಲಿ ಬಾಲ್ಯ ವಿವಾಹವನ್ನು ಕಾನೂನು ನಿಷೇಧಿಸುತ್ತದೆಯೇ?**
ಹೌದು, ಪಿಸಿಎಂಎ ಕಾಯ್ದೆಯು 18 ವಯಸ್ಸಿಗಿಂತ ಕಡಿಮೆ ವಯಸ್ಸಿನ ಬಾಲಕಿಯ ಮತ್ತು 21 ವಯಸ್ಸಿಗಿಂತ ಕಡಿಮೆ ವಯಸ್ಸಿನ ಬಾಲಕನ ವಿವಾಹವನ್ನು ನಿಷೇಧಿಸುತ್ತದೆ.

**ಇಂಡಿಪೆಂಡೆಂಟ್ ಥಾಟ್ ವಿ ಯೂನಿಯನ್ ಆಫ್ ಇಂಡಿಯಾ** (2017) ತೀರ್ಪಿನಲ್ಲಿ "ಬಾಲ್ಯ ವಿವಾಹವು ಒಂದು ಅಸಹ್ಯಕರ ಪದ್ಧತಿ ಮತ್ತು ಒಂದು ಮಗುವಿನ ಮಾಣವ ಹಕ್ಕುಗಳನ್ನು ಉಲ್ಲಂಘಿಸುತ್ತದೆ" ಎಂದು ಸರ್ವೋಚ್ಚ ನ್ಯಾಯಾಲಯವು ಗುರುತಿಸಿದೆ.

"ಮದುವೆಯಾದ ಹೆಣ್ಣು ಮಕ್ಕಳು ಗೃಹ ಸಂಬಂಧೀ ಹಿಂಸೆಗೆ ಹೆಚ್ಚಿನ ಅಪಾಯದಲ್ಲಿದ್ದು ಜೊತೆಗೆ ಸುರಕ್ಷಿತ ಲೈಂಗಿಕ ಸಂಬಂಧ ಮತ್ತು ಕುಟುಂಬ ಯೋಜನೆಯ ಮಾತುಕತೆ ನಡೆಸಲು ಸಾಧ್ಯವಾಗದೇ ಅವರನ್ನು ಲೈಂಗಿಕವಾಗಿ ಹರಡುವ ಸೋಂಕುಗಳು ತಗಲುವ ಅಪಾಯ, ಗರ್ಭಧಾರಣೆ ಮತ್ತು ಮಕ್ಕಳು ಪಡೆಯುವಿಕೆಯನ್ನು ಒಳಗೊಂಡಂತೆ ಅನೇಕ ಅಪಾಯಗಣ್ಣು ಹೆಚ್ಚುಸುತ್ತಿದೆ ಎಂದು ನ್ಯಾಯಾಲಯವು ಪುನರುಚ್ಚರಿಸಿದೆ. ಇದರ ಜೊತೆಯಲ್ಲಿ "ಹೆಣ್ಣು ಮಗುವಿಗೆ ತನ್ನ ಆಯ್ಕೆಯ ಅಧಿಕಾರದಿಂದ ವಂಚಿತಗೊಳಿಸಬಾರದು. ಒಬ್ಬ ಹೆಣ್ಣು ಮಗುವಿಕೆ ತನ್ನ ಶಿಕ್ಷಣದ ಅಧಿಕಾರದಿಂದ ವಂಚಿತಗೊಳಿಸಿದಾಗ ಆಕೆಯನ್ನು ಒಬ್ಬಪ್ರಬುದ್ಧ ಮಹಿಳೆಯಾಗುವ ಮತ್ತು ಆಕೆಯು ಸ್ವತಂತ್ರವಾಗಿ ಗಳಿಸಿವ ಮತ್ತು ಒಬ್ಬ ಸ್ವತಂತ್ರ ಮಹಿಳೆಯಾಗಿ ಸ್ವಾವಲಂಬನ ಜೀವನವನ್ನು ನಡೆಸುವ ಅವಕಾಶದಿಂದ ವಂಚಿತಗೊಳಿಸಿದಂತಾಗುತ್ತದೆ" ಎಂದು ನುಡಿದಿದೆ.

### ಬಾಲ್ಯ ವಿವಾಹವು ಒಂದು ಅಪರಾಧವೇ? ಈ ಅಪರಾಧಕ್ಕೆ ದಂಡಗಳೇನು?

ಪಿಸಿಎಂಎ ಕಾಯ್ದೆಯ ಅಡಿಯಲ್ಲಿ ಬಾಲ್ಯ ವಿವಾಹದಲ್ಲಿ ತೊಡಗಿದ್ದಲ್ಲಿ, ನಡೆಸಿಕೊಂಡಲ್ಲಿ, ಉತ್ತೇಜಿಸಿದ್ದಲ್ಲಿ ಅಥವಾ ಒಂದು ಮಗುವಿನ ವಿವಾಹವನ್ನು ನಡೆಸಲು ಸಹಾಯ ಮಾಡಿದ್ದಲ್ಲಿ ಅದು ಒಂದು ಅಪರಾಧವಾಗುತ್ತದೆ. ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯು ಈ ರೀತಿಯ ಚಟುವಟಿಕೆಗಳಲ್ಲಿ ತೊಡಗಿದ್ದಲ್ಲಿ ಎರಡು ವರ್ಷಗಳ ಜೈಲು ಶಿಕ್ಷೆ ಮತ್ತು ಗರಿಷ್ಠ 2 ಲಕ್ಷ ರೂಪಾಯಿ ದಂಡಕ್ಕೆ ಗುರಿಯಾಗಬಹುದು. (ಪಿಸಿಎಂಎ ಸೆಕ್ಷನ್ 9, 10, 11 ಅನ್ವಯಿಸುತ್ತದೆ)

ಈ ಕೆಳಗಿನವುಗಳಲ್ಲಿ ಅಪರಾಧಿಗಳು ಒಳಗೊಂಡಿರಬಹುದು :

- ಒಬ್ಬ ವಯಸ್ಕ ಮದುಮಗ 18 ವಯಸ್ಸಿಗಿಂತ ಕಡಿಮೆ ವಯಸ್ಸಿನ ಹುಡುಗಿಯನ್ನು ಮದುವೆಯಾದಲ್ಲಿ
- ಹೆತ್ತವರು ಅಥವಾ ಸಂಬಂಧಿಕರು ಬಾಲ್ಯ ವಿವಾಹವನ್ನು ಆಯೋಜಿಸಿದ್ದಲ್ಲಿ ಅಥವಾ ಭಾಗವಹಿಸಿದ್ದಲ್ಲಿ
- ಯಾವುದೇ ಪೂಜಾರಿ ಅಥವಾ ವ್ಯಕ್ತಿಯು ಇಂತಹ ಮದುವೆಯನ್ನು ನಡೆಸಿಕೊಂಡಲ್ಲಿ
- ಯಾವುದೇ ಸಂಸ್ಥೆಯು (ಧಾರ್ಮಿಕ ಅಥವಾ ದತ್ತಿ ಸಂಸ್ಥೆಗಳನ್ನು ಒಳಗೊಂಡಂತೆ) ಸಾಮೂಹಿಕ ಬಾಲ್ಯ ವಿವಾಹಗಳನ್ನು ಸಂಯೋಜಿಸಿದ್ದಲ್ಲಿ
- ಯಾವುದೇ ವ್ಯಕ್ತಿಯು ಬಾಲ್ಯ ವಿವಾಹ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಲ್ಲಿ ಅಥವಾ ವಿವಾಹವನ್ನು ನಿರ್ಧರಿಸುವ, ಊಟದ ವ್ಯವಸ್ಥೆ, ಪೆಂಡಾಲ್ ಮತ್ತು ಇತರ ಸೇವೆಗಳನ್ನು ಒಳಗೊಂಡಂತೆ ಸಹಾಯ ಮಾಡಿದ್ದಲ್ಲಿ

ಪಿಸಿಎಂಎ ಕಾನೂನಿನ ಅಡಿಯಲ್ಲಿ ಯಾವುದೇ ಹುಡುಗಿಗೆ ಜೈಲು ಶಿಕ್ಷೆ ನೀಡಲಾಗುವುದಿಲ್ಲ .

### ಬಾಲ್ಯ ವಿವಾಹವನ್ನು ನಿಲ್ಲಿಸಲು ನಾನು ಏನು ಮಾಡಬಹುದು?

ನೀವು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬಹುದು:

- ನಡೆಯುತ್ತಿರುವ ಬಾಲ್ಯ ವಿವಾಹದ ಬಗ್ಗೆ ಹತ್ತಿರದ ಪೋಲಿಸ್ ಠಾಣೆಗೆ, ನಿಮ್ಮ ಜಿಲ್ಲೆಯ ಅಥವಾ ತಾಲೂಕಿನ ಬಾಲ್ಯ ವಿವಾಹ ನಿಯಂತ್ರಣ ಅಧಿಕಾರಿಗೆ (ಸಿಎಂಪಿಓ), ಅಥವಾ ಮಕ್ಕಳ ಕಲ್ಯಾಣ ಸಮಿತಿ, ಅಥವಾ ಸರ್ಕಾರೇತರ ಸಂಸ್ಥೆಯ ಗಮನಕ್ಕೆ ಕೂಡಲೇ **ವರದಿ** ಮಾಡಬಹುದು. ಸಿಎಂಪಿಓ ಯಾರೆಂದು ನೋಡಲು **ಭಾಗ 4 ನ್ನು** ಗಮನಿಸಿ.
- ನೀವು ಪ್ರಥಮ ದರ್ಜೆ ನ್ಯಾಯಾಂಗ ನ್ಯಾಯಾಧೀಶರ ಬಳಿ ಅಥವಾ ಮಹಾನಗರ ನ್ಯಾಯಾಧೀಶರ (ಮೆಟ್ರೋಪಾಲಿಟನ್ ಮೆಜೆಸ್ಟ್ರೇ) ಬಳಿ **ನೇರವಾಗಿ ದೂರನ್ನು** ದಾಖಲಿಸಬಹುದು.

### ಬಾಲ್ಯ ವಿವಾಹವನ್ನು ಯಾರು ವರದಿ ಮಾಡಬಹುದು?

- ಮಗು (ಅವನೇ ಸ್ವತ:/ಅವಳೇ ಸ್ವತ)
- ಮಗುವಿನ ಹತ್ತಿರದ ಸ್ನೇಹಿತ (ಯಾವುದೇ ಕುಟುಂಬದ ಸದಸ್ಯರು, ಸ್ನೇಹಿತರು, ಅಥವಾ ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಗಳು ಆ ಮಗುವಿನ ಹತ್ತಿರದ ಸ್ನೇಹಿತರಾಗಿ ದೂರನ್ನು ದಾಖಲಿಸಬಹುದು)
- ಒಬ್ಬ ಬಾಲ್ಯ ವಿವಾಹ ನಿಯಂತ್ರಣ ಅಧಿಕಾರಿ
- ಯಾವುದೇ ಇತರ ವ್ಯಕ್ತಿ ಅಥವಾ ಸರ್ಕಾರೇತರ ಸಂಸ್ಥೆ

**ಬಾಲ್ಯ ವಿವಾಹ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಕೂಡಲೇ ಭೇಟಿ ಮಾಡಿ** ಕಾರ್ಯಕ್ರಮವನ್ನು ನಿಲ್ಲಿಸಲು ಮತ್ತು ಆ ಮಗುವ ರಕ್ಷಣೆ ಮಾಡುವಂತೆ **ಪೋಲಿಸರಿಗೆ ನಿರ್ದೇಶನ** ನೀಡುವ ವಿಶೇಷ ಅಧಿಕಾರವನ್ನು ಜಿಲ್ಲಾ ನ್ಯಾಯಾಧೀಶರೂ ಹೊಂದಿರುತ್ತಾರೆ. ಸಾಮಾನ್ಯವಾಗಿ ರಕ್ಷಣೆಯನ್ನು ಮಕ್ಕಳ ಸಹಾಯವಾಣಿಯ ಸಾಮಾಜಿಕ ಕಾರ್ಯಕರ್ತರ ಸಹಾಯದಿಂದ ನಡೆಸುತ್ತಾರೆ. ಮಗುವ ರಕ್ಷಣೆ ಮಾಡಿದ ನಂತರ ಪ್ರಪ್ರಥಮವಾಗಿ ಆ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ತರಬೇಕಾಗುತ್ತದೆ. (ಪಿಸಿಎಂಎ ಸೆಕ್ಷನ್ 13(5))

ಪ್ರಥಮ ದರ್ಜೆ ನ್ಯಾಯಾಧೀಶರು ಅಥವಾ ಮಹಾನಗರ ನ್ಯಾಯಾಧೀಶರು ಪಡೆದ ಮಾಹಿತಿಯ ಮೇರೆಗೆ ಅಥವಾ ಯಾವುದೇ ವರದಿಯ ಆಧಾರದ ಮೇಲೆ **ಬಾಲ್ಯ ವಿವಾಹದ ಬಗ್ಗೆ ಸ್ವತ: ತಾವಾಗೀಯೇ ಗಮನಿಸಬಹುದು. ನ್ಯಾಯಾಧೀಶರಿಗೆ ಬಾಲ್ಯ ವಿವಾಹ ನಡೆಯುವುದನ್ನು ನಿಲ್ಲಿಸಲು ಆದೇಶವನ್ನು ನೀಡುವ ಅಧಿಕಾರವನ್ನು** ಹೊಂದಿರುತ್ತಾರೆ. ಇದನ್ನು **ತಡೆಯಾಜ್ಞೆಯ ಆದೇಶ** ಎಂದು ಕರೆಯಲಾಗುತ್ತದೆ. ನ್ಯಾಯಾಧೀಶರು **ತುರ್ತುಪರಿಸ್ಥಿತಿಯಲ್ಲಿ ಮಧ್ಯಾಂತರ ತಡೆಯಾಜ್ಞೆಯ ಆದೇಶವನ್ನು ಜಾರಿ ಮಾಡಬಹುದು**,ಇದರ ಅರ್ಥವೇನೆಂದರೆ ತುರ್ತು ಸಂದರ್ಭಗಳಲ್ಲಿ ಇನ್ನೊಂದು ಪಕ್ಷದವರಿಗೆ ಸೂಚನೆಯನ್ನು ನೀಡದೇ ಆದೇಶವನ್ನು ಜಾರಿ ಮಾಡುವುದಾಗಿದೆ. (ಪಿಸಿಎಂಎ ಸೆಕ್ಷನ್ 13(7))

# ಭಾಗ 2
## ಹಕುಗಳು ಮತ್ತು ಪರಿಹಾರಗಳು

### ಮದುವೆಯಾದ ಬಾಲಕಿಯರ ಕಾನೂನು ಪರಿಹಾರದ ಹಕ್ಕುಗಳು

- ವಿವಾಹವನ್ನು ರದ್ದುಹೊಳಿಸುವ ಹಕ್ಕು (ಪಿಸಿಎಂಎ)
- ನಿರ್ವಹಣೆಯನ್ನು, ವಸತಿ, ಮಕ್ಕಳ ಪಾಲನೆ, ಮತ್ತು ಹಣವನ್ನು, ಅಮೂಲ್ಯ ವಸ್ತುಗಳನ್ನು, ಆಭರಣಗಳನ್ನು ಮರಳಿ ಪಡೆಯುವ ಮತ್ತು ಇತರ ವಿವಾಹದ ಸಂದರ್ಭದಲ್ಲಿ ಪಡೆದ ಉಡುಗೊರೆಗಳನ್ನು ಮರಳಿ ಪಡೆಯುವ ಹಕ್ಕುಗಳನ್ನು ಹೊಂದಿರುತ್ತಾರೆ (ಪಿಸಿಎಂಎ)
- ಕೌಟುಂಬಿಕ ದೌರ್ಜನ್ಯ ಮತ್ತು ಕ್ರೌರ್ಯದ ವಿರುದ್ಧ ರಕ್ಷಣೆಯ ಹಕ್ಕು (ಗೃಹ ಸಂಬಂಧೀ ಹಿಂಸೆಯಿಂದ ವಿರುದ್ಧ ಮಹಿಳೆಯರ ರಕ್ಷಣೆ ಅಧಿನಿಯಮನ; ಭಾರತ ದಂಡ ಸಂಹಿತೆ, ಸೆಕ್ಷನ್ 498 ಎ)
- ಬಾಲಕಿಯ ವಯಸ್ಸು 18 ವಯಸ್ಸಿಗಿಂತ ಕಡಿಮೆ ಇದ್ದು ಆಕೆಯ ಜೊತೆಗೆ ಗಂಡನು ಅತ್ಯಾಚಾರ ವೆಸಗಿದ್ದಲ್ಲಿ ಆ ವ್ಯಕ್ತಿಯ ವಿರುದ್ಧ ಅಪರಾಧ ದೂರನ್ನು (ಪ್ರಥಮ ಮಾಹಿತಿ ವರದಿ ಎಂದು ಕರೆಯಲಾಗುತ್ತದೆ) ದಾಖಲಿಸುವ ಹಕ್ಕನ್ನು ಹೊಂದಿರುತ್ತಾರೆ (ಭಾರತ ದಂಡ ಸಂಹಿತೆ, ಸೆಕ್ಷನ್ 376, 2 ಹೊರತುಪಡಿಸಿ)
- ಬಾಲಕಿಯು ತನ್ನ ಗರ್ಭಧಾರಣೆಯನ್ನು ವೈದ್ಯಕೀಯವಾಗಿ ತೆಗೆಸಬಹುದು, ಅಲ್ಲದೇ ಈ ಗರ್ಭಧಾರಣೆಯು 20 ವಾರಕ್ಕಿಂತ ಕಡಿಮೆ ಸಮಯಹೊಂದಿದ್ದಲ್ಲಿ ಮಾತ್ರ ಗರ್ಭಧಾರಣೆಯನ್ನು ತೆಗೆಸಬಹುದು, ಜೊತೆಗೆ ಕನಿಷ್ಟ ಎರಡು ನೋಂದಾಯಿತ ವೃತ್ತಿಪರ ವೈದ್ಯರು ಗರ್ಭಾವಸ್ಥೆಯ ಮುಂದುವರಿಕೆ ಗರ್ಭಿಣಿ ಮಹಿಳೆಯ ಜೀವನಕ್ಕೆ ಅಥವಾ ದೈಹಿಕ ಅಥವಾ ಮಾನಸಿಕ ಆರೋಗ್ಯಕ್ಕೆ ಗಂಭೀರವಾದ ಅಪಾಯವನ್ನು ಉಂಟುಮಾಡುತ್ತದೆ ಎಂದು ದೃಢಪಡಿಸಿದರೆ, ಅಥವಾ ದುರ್ಬಲ ಭ್ರೂಣದಿಂದಾಗಿ ಗಣನೀಯ ಅಪಾಯವಿರುತ್ತದೆ ಎಂದ ಸಂದರ್ಭದಲ್ಲಿ ಗರ್ಭಧಾರಣೆಯನ್ನು ತೆಗೆಸಬಹುದು. ಅತ್ಯಾಚಾರದಿಂದಾಗಿ ಉಂಟಾದ ಗರ್ಭಧಾರಣೆ ಅಥವಾ ಅಥವಾ ಗರ್ಭನಿರೋಧಕದ ವೈಫಲ್ಯದಿಂದ ಉಂಟಾದ ಗರ್ಭಧಾರಣೆಯಿಂದಾಗಿ ಗರ್ಭಿಣಿ ಮಹಿಳೆಯ ಮಾನಸಿಕ ಆರೋಗ್ಯಕ್ಕೆ ಗಂಭೀರವಾದ ನೋವನ್ನು ಉಂಟು ಮಾಡುತ್ತದೆ ಎಂದು ಭಾವಿಸಲಾಗಿದೆ. 20 ವಾರಗಳ ನಂತರ, ಗರ್ಭಧಾರಣೆಯಿಂದಾಗಿ ಗರ್ಭಿಣಿ ಮಹಿಳೆಯ ಜೀವಕ್ಕೆ ಅಪಾಯ ಇದೆ ಎಂದ ಸಂದರ್ಭಗಳಲ್ಲಿ ಗರ್ಭಧಾರಣೆಯನ್ನು ತೆಗೆಸುವಿಕೆಯನ್ನು ಅನುಮತಿಸುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ, ಅತ್ಯಾಚಾರದಿಂದ ಬಲಿಪಶುಗಳಾದ ಅಪ್ರಾಪ್ತ ಹೆಣ್ಣು ಮಕ್ಕಳು 20 ವಾರಕ್ಕೂ ಹೆಚ್ಚಿನ ಗರ್ಭಧಾರಣೆಯನ್ನು ಹೊಂದಿದ್ದಲ್ಲಿ ನ್ಯಾಯಾಲಯವು ಗರ್ಭಧಾರಣೆಯನ್ನು ತೆಗೆಸುವ ಅನುಮತಿಯನ್ನು ನೀಡಿದೆ. 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹುಡುಗಿಗೆ ಪೋಷಕರಿಂದ ಲಿಖಿತ ಅನುಮತಿ ಬೇಕಾಗಿದ್ದರೂ, ಆ ವ್ಯಕ್ತಿಯು ತನ್ನ ಕಾನೂನುಬದ್ಧ ಪೋಷಕನಾಗಿರಬೇಕಾಗಿರುವುದಿಲ್ಲ. ಕಾನೂನಿನ ಅಡಿಯಲ್ಲಿ ಗಂಡನ ಒಪ್ಪಿಗೆಯ ಅವಶ್ಯಕತೆ ಇರುವುದಿಲ್ಲ. (ಗರ್ಭಧಾರಣೆಯನ್ನು ವೈದ್ಯಕೀಯವಾಗಿ ತೆಗೆಸುವ ಕಾಯ್ದೆ, 1971)
- ಸರ್ಕಾರಿ ಮತ್ತು ಖಾಸಗೀ ಆಸ್ಪತ್ರೆಗಳಲ್ಲಿನ ಸಂತಾನೋತ್ಪತ್ತಿ ಮತ್ತು ಮಾತೃತ್ವ ಆರೋಗ್ಯ ಸೇವೆಗಳನ್ನು ಒಳಗೊಂಡಂತೆ ಉಚಿತ ಸೇವೆಗಳು ಮತ್ತು ಸರ್ಕಾರಿ ಯೋಜನೆಗಳ ಅಡಿಯಲ್ಲಿ ದೊರಕುವ ಇತರ ಸೌಲಭ್ಯಗಳಾದ ಜನನಿ ಸುರಕ್ಷಾ ಯೋಜನೆ ಮತ್ತು ಇತರ ರಾಜ್ಯ ನಿರ್ದಿಷ್ಟ ಯೋಜನೆಗಳು ಇವರಿಗೆ ಅನ್ವಯಿಸಬಹುದು. ಕೆಲವು ರಾಜ್ಯದ ಯೋಜನೆಗಳು ಬಡತನ ರೇಖೆಯ ಕೆಳಗೆ ಇರುವ ಮತ್ತು ಪರಿಶಿಷ್ಟ ಜಾತಿಗಳು/ ಪರಿಶಿಷ್ಟ ಪಂಗಡಗಳ ವಿಭಾಗಗಳಿಗೆ ಸೀಮಿತಗೊಳಿಸಲಾಗಿದೆ ಮತ್ತು ಕೆಲವು ಯೋಜನೆಗಳು ಮಹಿಳೆಯ ಮೊದಲ ಎರಡು ನೇರ ಜನನಗಳ (ಲೈವ್ ಬರ್ತ್) ಸೌಲಭ್ಯಗಳನ್ನು ನಿರ್ಬಂಧಿಸುತ್ತದೆ. ನಿರ್ದಿಷ್ಟವಾದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳ ಬಗ್ಗೆ ಹೆಚ್ಚಿನ ಮಾಹಿತಿಯು ಪ್ರತೀ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೆಬ್‌ಸೈಟ್‌ಗಳಲ್ಲಿ ಲಭ್ಯವಿರುತ್ತದೆ.
- ರಾಷ್ಟ್ರೀಯ ಕುಟುಂಬ ಕಲ್ಯಾಣ ಯೋಜನೆ ಅಡಿಯಲ್ಲಿ ಎಲ್ಲಾ ಸರ್ಕಾರಿ ಆರೋಗ್ಯ ಸೌಲಭ್ಯಗಳಲ್ಲಿ ಮತ್ತು ಆಶಾ (ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತೆ) ಸರ್ಕಾರಿ ಅಧಿಕಾರಿಗಳ ಮುಖಾಂತರ ಉಚಿತವಾಗಿ ಗರ್ಭನಿರೋಧಕ ಸೇವೆಗಳು ಲಭ್ಯವಿರುತ್ತದೆ. ಈ ಸೇವೆಗಳಲ್ಲಿ ಮಹಿಳೆಯರಿಗೆ ಗರ್ಭನಿರೋಧಕ ಮಾತ್ರೆಗಳು ಮತ್ತು ಕಾಂಡೋಮ್‌ಗಳು (ಆಶಾರವರ ಮುಖಾಂತರ ಅತ್ಯಲ್ಪ ವೆಚ್ಚದ ಮುಖಾಂತರ ಮನೆಗೆ ತಂದುಕೊಡುವಿಕೆಯು ಲಭ್ಯವಿರುತ್ತದೆ); ಗರ್ಭಾಶಯದ ಒಳಗಿನ ಗರ್ಭನಿರೋಧಕ ಸಾಧನಗಳು (ಐಯುಸಿಡಿ), ಮತ್ತು ತುರ್ತು ಸಂದರ್ಭದದ ಗರ್ಭನಿರೋಧಕ ಗುಳಿಗೆಗಳನ್ನು ಒಳಗೊಂಡಿರುತ್ತದೆ. ಗರ್ಭಧಾರಣೆ-ಪರೀಕ್ಷಾ ಕಿಟ್‌ಗಳನ್ನು ಉಚಿತವಾಗಿ ಹಳ್ಳಿ ಮಟ್ಟದ ಆರೋಗ್ಯ ಉಪ-ಕೇಂದ್ರಗಳಲ್ಲಿ ಮತ್ತು ಆಶಾ ಮುಖಾಂತರ ಪಡೆಯಬಹುದು. ಈ ಸೇವೆಗಳನ್ನು ಪಡೆಯಲು ಪೋಶಕರಿಂದ ಅಥವಾ ಗಂಡನಿಂದ ಒಪ್ಪಿಗೆಯನ್ನು ಪಡೆಯುವ ಅವಶ್ಯಕತೆ ಇರುವುದಿಲ್ಲ. ಶಾಶ್ವತ ಗರ್ಭನಿರೋಧಕ ವಿಧಾನಗಳಾದ ಪುರುಶ ಮತ್ತು ಮಹಿಳೆಯರಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆಗಳು ಪ್ರಾಥಮಿಕ ಆರೋಗ್ಯ ಕೇಂದ್ರದ ಮಟ್ಟದಲ್ಲಿ ಮತ್ತು ಉನ್ನತ ಆರೋಗ್ಯ ಸೇವೆಗಳ ಮಟ್ಟದಲ್ಲಿ ದೊರಕುತ್ತದೆ. ವೈದ್ಯಕೀಯವಾಗಿ ಸೂಚಿಸ ದಂದರ್ಭವನ್ನು ಹೊರತು ಪಡಿಸಿ, 22-49 ವಯಸ್ಸಿನ ಮಹಿಳೆಯರಿಗೆ, ಹಾಗೂ ಕನಿಷ್ಠ ಒಂದು ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ ಒಂದು ಮಗುವನ್ನು ಹೊಂದಿರುವ ಮಹಿಳೆಯರಿಗೆ ಮಾತ್ರ ಸಂತಾನಹರಣ ಶಸ್ತ್ರ ಚಿಕಿತ್ಸೆಯು ಲಭ್ಯವಿರುತ್ತದೆ. (ಮಹಿಳೆಯರ ಸಂತಾನಹರಣ ಶಸ್ತ್ರ ಚಿಕಿತ್ಸೆಯ ಉಲ್ಲೇಖ ಕೈಪಿಡಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ)
- ದೊರಕುವ ಸೇವೆಗಳ ಬಗ್ಗೆ ಮತ್ತು ಯೋಜನೆಗಳ ಬಗ್ಗೆ ಒಬ್ಬ ಸಿಎಂಪಿಓ ಅಥವಾ ಯಾವುದೇ ಸರ್ಕಾರಿ ಆರೋಗ್ಯ ಕೇಂದ್ರ ಅಥವಾ ಆಸ್ಪತ್ರೆಯಿಂದ ಯಾರೇ ಆಗಿದ್ದರೂ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು.

ಬಾಲ್ಯ ವಿವಾಹದಲ್ಲಿ ಬಾಲಕಿಯರನ್ನು "ಆರೈಕೆ ಮತ್ತು ರಕ್ಷಣೆ ಯ ಅವಶ್ಯಕತೆ ಇರುವ ಮಕ್ಕಳು" ಎಂದು ಪರಿಗಣಿಸಲಾಗುತ್ತದೆ. ಇದರ ಅರ್ಥವೇನೆಂದರೆ, ಯಾರೇ ಆದರೂ ನಿಂದನೆಯ ಬಗ್ಗೆ ದೂರನ್ನು ನೀಡಲು ಹತ್ತಿರದ **ಮಕ್ಕಳ ಕಲ್ಯಾಣ ಸಮಿತಿ**ಯನ್ನು ಸಂಪರ್ಕಿಸಬಹುದು ಎಂದು ಅರ್ಥೈಸುತ್ತದೆ. ಮಕ್ಕಳ ಕಲ್ಯಾಣ ಸಮಿತಿಯ ವಿವರಣೆಗಳು ಪ್ರತೀ ರಾಜ್ಯದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವೆಬ್‌ಸೈಟ್‌ಗಳಲ್ಲಿ, ಮಕ್ಕಳ ಸಹಾಯವಾಣಿಯ (1098) ಮುಖಾಂತರ ಲಭ್ಯವಿರುತ್ತದೆ, ಅಥವಾ ಹತ್ತಿರದ ಪೋಲಿಸ್ ಠಾಣೆಗೆ ಭೇಟಿ ನೀಡಿ ವಿವರಣೆಯನ್ನು ಪಡೆಯಬಹುದು.

### ಬಾಲ್ಯ ವಿವಾಹವು ಈ ಮುಂಚೆಯೇ ನಡೆದ ಸಂದರ್ಭದಲ್ಲಿ ಯಾವ ಕಾನೂನು ಪರಿಹಾರಗಳು ಲಭ್ಯವಿರುತ್ತದೆ?

ಎಪ್ರಿಲ್ 2017 ರ ನಂತರ ಕರ್ನಾಟಕದಲ್ಲಿ ನಡೆದ ಬಾಲ್ಯ ವಿವಾಹಗಳನ್ನು ಹೊರತುಪಡಿಸಿ, ಅದಕ್ಕೂ ಹಿಂದೆ ನಡೆದ ಬಾಲ್ಯ ವಿವಾಹಗಳನ್ನು ಸಾಮಾನ್ಯವಾಗಿ ಮಾನ್ಯ ಎಂದು ಪರಿಗಣಿಸಲಾಗುತ್ತದೆ. ಹೀಗಿದ್ದರೂ, ಅಪ್ರಾಪ್ತ ವಧು ಅಥವಾ ವರನು ವಿವಾಹವನ್ನು ರದ್ದು ಮಾಡಲು ಕಾನೂನು ಮೊಕದ್ದಮೆಯನ್ನು ದಾಖಲಿಸಬಹುದು. ಇದನ್ನು **ಅನೂರ್ಜಿತ ವಿವಾಹ** ಎಂದು ಕರೆಯಲಾಗುತ್ತದೆ.

> **ಗಮನಿಸಿ: ಬಾಲ್ಯ ವಿವಾಹವು ಕೆಲವು ಪ್ರಕರಣಗಳಲ್ಲಿ ಅನೂರ್ಜಿತವಾಗಿದೆ, ಅಂದರೆ ಅದು ಪ್ರಾರಂಭದಿಂದಲೂ ಅಮಾನ್ಯವಾಗಿದೆ ಎಂದು ಪರಿಗಣಿಸಲಾಗುತ್ತದೆ: ಇಂತಹ ಪ್ರಕರಣಗಳಲ್ಲಿ ಒಂದು ಅಪ್ರಾಪ್ತ ಮಗುವನ್ನು ಅವನ ಅಥವಾ ಅವಳ ಹೆತ್ತವರ ಅಥವಾ ಪೋಷಕರ ಪಾಲನಾ ಒಡೆತನದಿಂದ ತೆಗೆಯಲಾಗಿದೆ, ಅಥವಾ ಒಬ್ಬ ಅಪ್ರಾಪ್ತರನ್ನು ವಿವಾಹಕ್ಕಾಗಿ, ಸಾಗಾಣಿಕೆಗಾಗಿ ಅಥವಾ ಲೈಂಗಿಕ ಶೋಷಣೆಗಾಗಿ ಬಳಸಲಾಗಿದೆ ಎಂದು ಪರಿಗಣಿಸುತ್ತದೆ.**

ಈ ಕೆಳಗಿನ ಪರಿಹಾರಗಳು ಲಭ್ಯವಿರುತ್ತದೆ:

#### 1. ಪಿಸಿಎಂಎ ಕಾಯ್ದೆಯ ಅಡಿಯಲ್ಲಿ ವಿವಾಹವನ್ನು ರದ್ದುಪಡಿಸುವುದು ಮತ್ತು ಪರಿಹಾರಗಳು

ಅಪ್ರಾಪ್ತ ವಧು ಮತ್ತು ವರನು **ವಿವಾಹ ರದ್ದುಗೊಳಿಸುವ ಮೊಕದ್ದಮೆಯನ್ನು** ದಾಖಲಿಸಿಬಹುದು.

ಜಿಲ್ಲಾ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ದಾಖಲಿಸಬೇಕು. ಈ ಮೊಕದ್ದಮೆಯನ್ನು ಹುಡುಗಿಗೆ 18 ವಯಸ್ಸು ತುಂಬಿದ ನಂತರ ಎರಡು ವರ್ಷದ ಒಳಗೆ ಮತ್ತು ಹುಡುಗನಿಗೆ 21 ವರ್ಷ ತುಂಬಿದ ನಂತರ ಎರಡು ವರ್ಷದ ಒಳಗೆ ದಾಖಲಿಸಬೇಕು. ಒಬ್ಬ ಕಾನೂನುಬದ್ಧ ಪೋಷಕರು ಅಥವಾ ಹತ್ತಿರದ ಸ್ನೇಹಿತರು ವಿವಾಹಿತ ಅಪ್ರಾಪ್ತರ ಪರವಾಗಿ ಮೊಕದ್ದಮೆಯನ್ನು ದಾಖಲಿಸಬಹುದು. (ಪಿಸಿಎಂಎ ಸೆಕ್ಷನ್ 3)

ಇದೇ ಮೊಕದ್ದಮೆಯಲ್ಲಿ, 18 ವಯಸ್ಸಿಗಿಂತ ಕಡಿಮೆ ವಯಸ್ಸಿನ ಹುಡುಗಿಯು ಹೆಚ್ಚುವರಿ ಪರಿಹಾರವನ್ನು ಸಹ ವಿನಂತಿಸಬಹುದು:

- ಅವಳು ಮರುವಿವಾಹ ಆಗುವ ವರೆಗೆ, ಮಾಸಿಕ ನಿರ್ವಹಣೆ ಅಥವಾ ಮಾಸಿಕ ಆಧಾರದ ಮೇಲೆ ಹಣಕಾಸಿನ ಬೆಂಬಲ ಅಥವಾ ಒಟ್ಟು ಮೊತ್ತವನ್ನು ವಿನಂತಿಸಬಹುದು.
- ಅವಳು ಮರುವಿವಾಹ ಆಗುವ ವರೆಗೆ ವಸತಿಯ ನಿರ್ದೇಶನ
- ಮಕ್ಕಳ ಪಾಲನೆಯ ನಿರ್ದೇಶನ
- ಮಕ್ಕಳ ಪಾಲನೆಗೆ ನಿರ್ವಹಣೆ
- ಹಣವನ್ನು, ಅಮೂಲ್ಯ ವಸ್ತುಗಳನ್ನು, ಆಭರಣಗಳನ್ನು ಮತ್ತು ವಿವಾಹದಲ್ಲಿ ಪಡೆದ ಇತರ ಉಡುಗೊರೆಗಳನ್ನು ಮರಳಿ ಪಡೆಯುವುದು

> **ಗಮನಿಸಿ: ರದ್ದುಗೊಳಿಸಿದ ವಿವಾಹದಿಂದ ಹುಟ್ಟಿದ ಮಗುವನ್ನು ಕಾನೂನು ನ್ಯಾಯಸಮ್ಮತ ಮಗು ಎಂದು ಪರಿಗಣಿಸುತ್ತದೆ (ಪಿಸಿಎಂಎ, ಸೆಕ್ಷನ್ 6). ಇಂತಹ ಮಕ್ಕಳಿಗೆ ತಮ್ಮ ಹೆತ್ತವರ ಆಸ್ತಿಯನ್ನು ಅನುವಂಶಿಕವಾಗಿ ಪಡೆಯುವ ಹಕ್ಕನ್ನು ಹೊಂದಿರುತ್ತಾರೆ.**

#### 2. ಗೃಹ ಸಂಬಂಧೀ ಹಿಂಸೆಯಿಂದ ವಿರುದ್ಧ ಮಹಿಳೆಯರ ರಕ್ಷಣೆ ಅಧಿನಿಯಮನ, 2005 (ಡಿವಿ ಕಾಯ್ದೆ) ಅಡಿಯಲ್ಲಿ ನಿರ್ದೇಶನ

ಒಂದು ಬಾಲ್ಯ ವಿವಾಹದಿಂದಾಗಿ ಒಬ್ಬ ಅಪ್ರಾಪ್ತ ಹೆಣ್ಣು ಮಗು (ಪ್ರಸ್ತುತ ಅಥವಾ ಹಿಂದೆ) ಯಾವುದೇ ದೈಹಿಕ, ಭಾವನಾತ್ಮಕ, ಆರ್ಥಿಕ, ಅಥವಾ ಲೈಂಗಿಕ ದೌರ್ಜನ್ಯವನ್ನು ಎದುರಿಸಿದ್ದಲ್ಲಿ ಆ ದೌರ್ಜನ್ಯವನ್ನು ಗೃಹ ಸಂಬಂಧೀ ಹಿಂಸೆಎಂದು ಪರಿಗಣಿಸಲಾಗುತ್ತದೆ.

ಬಾಲ್ಯ ವಿವಾಹ ನಡೆದ ಸಂದರ್ಭದಲ್ಲಿ ಡಿವಿ ಕಾಯ್ದೆಯ ಅಡಿಯಲ್ಲಿ ಒಂದು ಹೆಣ್ಣು ಮಗು ಈ ಕೆಳಗಿನವುಗಳನ್ನು ಕೇಳಬಹುದು:

- ನಿರ್ವಹಣೆ ಅಥವಾ ಹಣಕಾಸಿನ ಬೆಂಬಲ (ವೈದ್ಯಕೀಯ ವೆಚ್ಚಗಳು ಒಳಗೊಂಡಿರುತ್ತದೆ)
- ವಸತಿಯ ನಿರ್ದೇಶನ (ವೈವಾಹಿಕ ಮನೆಯಲ್ಲಿ ಅಥವಾ ಪ್ರತ್ಯೇಕ ಬಾಡಿಗೆ ಮನೆ ಅಥವಾ ಸ್ವಂತ ಮನೆಯಲ್ಲಿ)
- ಕೌಟುಂಬಿಕ ನ್ಯಾಯಾಲಯವು ಮೊಕದ್ದಮೆಯ ವಾದವಿವಾದವನ್ನು ಕೇಳುವ ತನಕ ಮಕ್ಕಳ ಪಾಲನೆಯ ತಾತ್ಕಾಲಿಕ ಒಡೆತನವನ್ನು ಪಡೆಯುವುದು.
- ಪರಿಹಾರ (ಗೃಹ ಸಂಬಂಧೀ ಹಿಂಸೆ ನಡೆಸಿರುವ ಕಾರಣ)
- ಮುಂದೆ ನಡೆಯುವ ಷೋಷಣೆಯನ್ನು ತಡೆಗಟ್ಟಲು ರಕ್ಷಣಾ ನಿರ್ದೇಶನವನ್ನು ಪಡೆಯುವ ಹಕ್ಕು

ಪಿಸಿಎಂಎ ಕಾಯ್ದೆಯ ಅಡಿಯಲ್ಲಿ ದಾಖಲಿಸಿದ ವಿಚಾರಣಾ ಮೊಕದ್ದಮೆಯಲ್ಲಿ ಈ ನಿರ್ದೇಶನಗಳನ್ನು ಪಡೆಯಬಹುದು. ಉದಾಹರಣೆಗೆ, ಒಬ್ಬರು ಪಿಸಿಎಂಎ ಅಡಿಯಲ್ಲಿ ಮೊಕದ್ದಮೆಯನ್ನು ದಾಖಲಿಸದೇ ಇದ್ದ ಸಂದರ್ಭದಲ್ಲಿ, ಅವರು ನೇರವಾಗಿ ಡಿವಿ ಕಾಯ್ದೆಯ ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ ಈ ನಿರ್ದೇಶನಗಳನ್ನು ಪಡೆಯಬಹುದು. ಮಹಾನಗರ ನ್ಯಾಯಾಧೀಶರ ಸಮ್ಮುಖದಲ್ಲಿ ಡಿವಿ ಕಾಯ್ದೆಯ ಅರ್ಜಿಯನ್ನು ದಾಖಲಿಸಬಹುದು. ಗಮನಿಸಿ: ಈ ಕಾಯ್ದೆಯ ಅಡಿಯಲ್ಲಿ ದಾಖಲಿಸಿದ ಅರ್ಜಿಯನ್ನು ಒಬ್ಬರು ವಿವಾಹದಲ್ಲಿ ನಡೆದ ಗೃಹ ಸಂಬಂಧೀ ಹಿಂಸೆಯ ವಿವರಣೆಯನ್ನು ನೀಡತಕ್ಕದ್ದು.

#### 3. ಅಪರಾಧ ಪ್ರಕ್ರಿಯಾ ಸಂಹಿತೆ, 1973 ರ ಸೆಕ್ಷನ್ 125 ರ ಅಡಿಯಲ್ಲಿ ನಿರ್ವಹಣೆಯ ಪಡೆಯುವಿಕೆ

ತನ್ನ ಪತಿಯು ಅವರನ್ನು ನಿರ್ಲಕ್ಷಿಸುವ ಅಥವಾ ಅವಳಿಗೆ ನಿರ್ವಹಣೆ ನೀಡಲು ಒಪ್ಪದೇ ಇದ್ದ ಕಾರಣದ ಸಂದರ್ಭದಲ್ಲಿ ತನ್ನ ಪತಿಯಿಂದ ಅಪರಾಧ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ಒಬ್ಬ ಮಹಿಳೆಯು ನಿರ್ವಹಣೆಯ ಹಕ್ಕನ್ನು (ಅನ್ವಯಿಸುವ ವೈಯಕ್ತಿಕ ಕಾನೂನನ್ನು ಹೊರತಾಗಿಯೂ) ಪಡೆಯಬಹುದು. ಈ ಪರಿಹಾರವು ವೈಯಕ್ತಿಕ ಕಾನೂನುಗಳ ಅಡಿಯಲ್ಲಿ ಪಡೆಯುವ ನಿರ್ವಹಣೆ ಅಥವಾ ಡಿವಿ ಕಾಯ್ದೆಯ ಅಡಿಯಲ್ಲಿ ಮನವಿ ಮಾಡಿರುವ ನಿರ್ವಹಣೆಗಿಂತ ಹೆಚ್ಚುವರಿಯಾಗಿರುತ್ತದೆ. ಮಹಾನಗರ ನ್ಯಾಯಾಧೀಶರ ಸಮ್ಮುಖದಲ್ಲಿ ಅಥವಾ ಪ್ರಥಮ ದರ್ಜೆ ನ್ಯಾಯಾಂಗ ನ್ಯಾಯಾಧೀಶರ ಸಮ್ಮುಖದಲ್ಲಿ ಅಪರಾಧ ಪ್ರಕ್ರಿಯಾ ಸಂಹಿತ, ಸೆಕ್ಷನ್ 125ರ ಅಡಿಯಲ್ಲಿ ನಿರ್ವಹಣೆ ಪಡೆಯುವಿಕೆಯ ಅರ್ಜಿಯನ್ನು ದಾಖಲಿಸಬಹುದು.

#### 4. ಭಾರತ ದಂಡ ಸಂಹಿತೆ ಅಡಿಯಲ್ಲಿ ಪಡೆಯಬಹುದಾದ ಪರಿಹಾರಗಳು

**ತನ್ನ ಪತಿಯಿಂದ ಅಥವಾ ಅವನ ಕುಟುಂಬದ ಯಾರಾದರೂ ಒಬ್ಬ ಸದಸ್ಯರಿಂದ ಕ್ರೌರ್ಯ ನಡೆದ ಸಂದರ್ಭದಲ್ಲಿ ಅದು ಭಾರತ ದಂಡ ಸಂಹಿತೆ ಸೆಕ್ಷನ್ 498ಎ ಅಡಿಯ ಅಪರಾಧವಾಗಿರುತ್ತದೆ.** ಒಬ ಅಪ್ರಾಪ್ತ ಬಾಲಕಿಗೆ ದೈಹಿಕ ಅಥವಾ ಮಾನಸಿಕ ಕ್ರೌರ್ಯ ನಡೆದ ಸಂದರ್ಭದಲ್ಲಿ ಆ ಬಾಲಕಿಯು ಹತ್ತಿರದ ಪೋಲಿಸ್ ಠಾಣೆಯಲ್ಲಿ ಅಪರಾಧ ದೂರನ್ನು (ಪ್ರಥಮ ಮಾಹಿತಿ ವರದಿ ಎಂದು ಕರೆಯಲಾಗುತ್ತದೆ) ದಾಖಲಿಸಬಹುದು. ಉದ್ದೇಶ ಪೂರ್ವಕ ನಡತೆಯಿಂದಾಗಿ ಮದುವೆಯಾದ ಬಾಲಕಿಯು ಆತ್ಮಹತ್ಯೆ ಮಾಡಿಕೊಂಡ ಸಂದರ್ಭ ಅಥವಾ ಅವಳಿಗೆ ಗಂಭೀರವಾದ ಗಾಯವನ್ನು ಉಂಟುಮಾಡಿದ ಅಥವಾ ಅವಳ ದೈಹಿಕ ಅಥವಾ ಮಾನಸಿಕ ಆರೋಗ್ಯಕ್ಕೆ ಅಪಾಯ ತಂದೊಡ್ಡಿದ್ದ ಸಂದರ್ಭಗಳು ಜೊತೆಗೆ ವರದಕ್ಷಿಣೆಗಾಗಿ ಯಾವುದೇ ಕಿರುಕುಳವನ್ನು ನೀಡಿದ ಸಂದರ್ಭಗಳು ಕ್ರೌರ್ಯದಲ್ಲಿ ಒಳಗೊಂಡಿರುತ್ತದೆ.

ಈ ಕಾನೂನಿನ ಅಡಿಯಲ್ಲಿ, ಒಬ್ಬ ಪತಿಯು ತನ್ನ 18 ವಯಸ್ಸಿಗಿಂತ ಕಡಿಮೆ ವಯಸ್ಸಿನ ಪತ್ನಿಯೊಂದಿಗೆ ಬಲವಂತದಿಂದ ಲೈಂಗಿಕ ಸಂಭೋಗವನ್ನು ನಡೆಸಿದ್ದಲ್ಲಿ ಅದನ್ನು ಅತ್ಯಾಚಾರವೆಂದು ಪರಿಗಣಿಸುತ್ತದೆ. ಇಂತಹ ಸಂದರ್ಭದಲ್ಲಿ, ಪತ್ನಿಯು ಪೋಲಿಸರನ್ನು ಸಂಪರ್ಕಿಸಬಹುದು ಮತ್ತು **ಭಾರತ ದಂಡ ಸಂಹಿತೆ, ಪರಿಚ್ಛೇದ 376 ರ ಅಡಿಯಲ್ಲಿ ನಡೆದ ಅತ್ಯಾಚಾರದ ಬಗ್ಗೆ ಅಪರಾಧ ದೂರನ್ನು** ದಾಖಲಿಸಬಹುದು.

#### 5. ವಿಚ್ಛೇದನ

ಬಾಲ್ಯ ವಿವಾಹವಾದ ಒಬ್ಬ ಮಹಿಳೆಯು 20 ವಯಸ್ಸು ದಾಟಿದ್ದು ಮತ್ತು ಇಂತಹ ಸಂದರ್ಭದಲ್ಲಿ ಆಕೆಗೆ ನಡೆದ ವಿವಾಹವನ್ನು ಪಿಸಿಎಂಎ ಕಾಯ್ದೆಯ ಅಡಿಯಲ್ಲಿ ರದ್ದುಗೊಳಿಸಲು ಸಾಧ್ಯವಿಲ್ಲ, ಆದರೆ ಆಕೆಯು ಕ್ರೌರ್ಯದ ಆಧಾರದ ಮೇಲೆ ಅಥವಾ ಸಂಬಂಧಿತ ವೈಯಕ್ತಿಕ ಕಾನೂನಿನಲ್ಲಿ ಅನ್ವಯಿಸುವ ಇತರ ಆಧಾರಗಳ ಅಡಿಯಲ್ಲಿ ವಿಚ್ಛೇದನವನ್ನು ಪಡೆಯಲು ಮೊಕದ್ದಮೆಯನ್ನು ದಾಖಲಿಸಬಹುದು. ಹಿಂದೂ, ಮುಸ್ಲಿಂ, ಪಾರ್ಸಿ ಮತ್ತು ಕ್ರಿಸ್ಚಿಯನ್ ವೈಯಕ್ತಿಕ ಕಾನೂನುಗಳಲ್ಲಿ ಕ್ರೌರ್ಯ, ಪರಿತ್ಯಾಗ, ವ್ಯಭಿಚಾರ ಮತ್ತು ಬಹುಪತ್ನಿ ಕಾರಣಗಳ ಆಧಾರಗಳು ವಿಚ್ಛೇದನಕ್ಕೆ ಮುಖ್ಯ ಕಾರಣಗಳಾಗಿವೆ.